# ಮಕ್ಕಳ ಪದಕೋಶ ಯಾಕಿಷ್ಟು ಕಿರಿದು?

**ಭಾವನೆಗಳ ಅಭಿವ್ಯಕ್ತಿಗೆ ನಮ್ಮ ಮಕ್ಕಳು ಕೆಲವು ಶಬ್ದಗಳನ್ನಷ್ಟೇ ಬಳಸುತ್ತಿದ್ದಾರೆ. ಅವರ ಪದಸಂಪತ್ತನ್ನು ಹಿಗ್ಗಲಿಸುವ ಕೆಲಸವನ್ನು ಪೋಷಕರು ಪ್ರಜ್ಞಾಪೂರ್ವಕವಾಗಿ ಮಾಡಬೇಕಾಗಿದೆ.**

■ ಸ್ವಯಂಪ್ರಭಾ

ವಾಟ್ಸ್‌ಆ್ಯಪ್‌ನಲ್ಲಿ ಒಂದು ವಿಡಿಯೊ ಬಂದಿತ್ತು. ಆನೆ ರಸ್ತೆಯಲ್ಲಿ ತನ್ನ ಪಾಡಿಗೆ ಸಾಗುತ್ತಿತ್ತು. ಅದನ್ನು ವಿಡಿಯೊ ಮಾಡುತ್ತಿದ್ದವರ ಬಳಿ ನಿಂತ ಹುಡುಗಿಯೊಬ್ಬಳು ಅಚ್ಚರಿಯಿಂದ ಉದ್ಗಾರ ಹೊರಡಿಸುತ್ತಿದ್ದಳು. ನಿರ್ಜನ ರಸ್ತೆಯಲ್ಲಿ ಸಾಗಿ ಬರುತ್ತಿರುವ ಆನೆ ನಿಜಕ್ಕೂ ಬಹಳ ಗಂಭೀರವಾಗಿ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ಬರುತ್ತಿತ್ತು. ‘ವಾವ್ ವಾಟ್ ಅ ಹೆಲ್!’ ಎಂಬ ಉದ್ಗಾರ ಕಿವಿಗೆ ಅಪ್ಪಳಿಸುವಂತೆ ಕೇಳಿಸಿತು. ಆನೆಯನ್ನು ನೋಡಿದ ತಕ್ಷಣ ಹೊರಟ ಆ ಉದ್ಗಾರದೊಂದಿಗೆ ಆ ಬಾಲಕಿ ಖುಷಿಯ ಮಾತುಗಳನ್ನು ಶುರು ಮಾಡಿದ್ದಳು. ಅಷ್ಟು ಚಂದದ ಆನೆಯದು. ಸೊಂಡಿಲನ್ನು ತಿರುವುತ್ತ, ನಿಧಾನ ಹೆಜ್ಜೆ ಇಡುತ್ತ ಸಾಗಿತ್ತು. ಕಾಡಿನಿಂದ ಬಹುಶಃ ದಾರಿ ತಪ್ಪಿ ಬರುತ್ತಿತ್ತೇನೋ. ಆದರೆ ಅಚ್ಚರಿ ಮತ್ತು ಖುಷಿಯ ಅಭಿವ್ಯಕ್ತಿಯು ‘ಹೆಲ್’ ಎಂಬುದಾಗಿತ್ತು.

ವಿಸ್ಮಯ, ಅಚ್ಚರಿ, ಖುಷಿಯನ್ನು ಅಭಿವ್ಯಕ್ತಿಸುವ ಉದ್ಗಾರವನ್ನು ಇಂದಿನ ಮಕ್ಕಳು ಎಷ್ಟೊಂದು ಕೆಟ್ಟದಾಗಿ ಪ್ರಕಟಿಸುತ್ತಾರೆ ಎಂದು ಹಲವು ಬಾರಿ ಅನಿಸುತ್ತದೆ. ಅವರ ಬಳಿ ಪದ ಸಂಪತ್ತಿನ ತೀವ್ರ ಕೊರತೆ ಇರುವುದು ಇಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ.

ರಿಯಾಲಿಟಿ ಶೋಗಳಲ್ಲಿ ತೀರ್ಪುಗಾರರಾಗಿ ಭಾಗವಹಿಸುವವರ ಪೈಕಿ ಕೆಲವರು ಹೀಗೆ ಪದಗಳಿಗಾಗಿ ತಡಕಾಡುವುದು ವೀಕ್ಷಕರ ಅರಿವಿಗೆ ಬರುತ್ತದೆ. ಕೆಟ್ಟ ಪದಗಳನ್ನು ಇಂಗ್ಲಿಷ್‌ನಲ್ಲಿ ಉಚ್ಚರಿಸಿ, ಅವು ಪ್ರದರ್ಶನಕ್ಕೆ ಸಂದ ಗೌರವ ಎಂಬಂತೆ ಬಿಂಬಿಸಲಾಗುತ್ತದೆ. ಇನ್ನು ಕೆಲವೊಮ್ಮೆ ಪದಗಳ ತಪ್ಪು ಜೋಡಣೆಯನ್ನು ಅರೆಬರೆಯಾಗಿ ಉಲ್ಲೇಖಿಸಿ, ಕೊನೆಗೆ **‘I just can’t put all this into words really hell out of it’** ಎಂದು ಹೇಳುವುದೂ ಉಂಟು. ನೃತ್ಯವನ್ನೋ ಹಾಡನ್ನೋ ಪ್ರಸ್ತುತಪಡಿಸಿದವರು, ‘ಏನೋ ಒಳ್ಳೆಯದನ್ನು ಹೇಳುತ್ತಿದ್ದಾರೆ’ ಎಂದು ಭಾವಿಸಬೇಕಷ್ಟೇ.

ಭಾವನೆಗಳ ಅಭಿವ್ಯಕ್ತಿಯನ್ನು ಪದಗಳಲ್ಲಿ ಪೋಣಿಸುವುದನ್ನು ಕಲಿಯುವುದಕ್ಕೆ ತುಸುವಾದರೂ ಸಾಹಿತ್ಯದ ಸ್ಪರ್ಶ ಇರಬೇಕು. ಅಂದರೆ ಶಿಷ್ಟ ಸಾಹಿತ್ಯ ಅಧ್ಯಯನ ಮಾಡಬೇಕೆಂದೇನೂ ಇಲ್ಲ. ಆದರೆ ಕತೆಗಳು, ನಾಟಕಗಳು, ಆಲಿಸುವ ಹಾಡುಗಳು, ಸೌಂದರ್ಯವನ್ನು ವಿವರಿಸುವ ಪದಗಳನ್ನು ಹೊಂದಿರುತ್ತವೆ. ಮಕ್ಕಳು ಇಂತಹ ಹಾಡುಗಳು, ಕತೆಗಳು, ನಾಟಕದ ಸಂಭಾಷಣೆಗಳನ್ನು ಕೇಳುವಂತಹ ಅವಕಾಶಗಳು ದೊರೆತಾಗ, ಅವರ ಪದ ಸಂಪತ್ತು ಹೆಚ್ಚಾಗುತ್ತದೆ. ಯಾವ ಭಾವನೆಯನ್ನು ಯಾವ ರೀತಿಯಲ್ಲಿ ಅಭಿವ್ಯಕ್ತಪಡಿಸಬೇಕು ಎಂಬ ಅರಿವೂ ಮೂಡುತ್ತದೆ.

ಪ್ರತಿಯೊಂದು ವಿಸ್ಮಯಕ್ಕೂ ಸೌಂದರ್ಯಕ್ಕೂ ಅಚ್ಚರಿಗೂ **awesome** ಎಂಬ ಪದವೊಂದನ್ನೇ ಇತ್ತೀಚೆಗೆ ಮಕ್ಕಳು ಅವಲಂಬಿಸುತ್ತಾರೆ. ಉಪಮೆಗಳು, ಹೋಲಿಕೆಗಳನ್ನು ಬಳಸಿಕೊಂಡು ಹೇಗೆ ಮಾತನಾಡಬಹುದು ಎಂಬುದನ್ನು ಅವರು ದೊಡ್ಡವರ ಮಾತುಗಳನ್ನು ಕೇಳಿ, ಗಮನಿಸಿ ಕಲಿಯುತ್ತಾರೆ. ಮೊದಲೆಲ್ಲ ಹತ್ತಾರು ಗಾದೆಗಳು ಹಿರಿಯರ ಸಂಭಾಷಣೆಯ ನಡುವೆ ನುಸುಳಿ ಬರುತ್ತಿದ್ದವು. ಅವು ಲೋಕದೃಷ್ಟಿಯನ್ನು ವಿವರಿಸುತ್ತಿದ್ದವು. ಒಂದು ವಿಷಯವನ್ನು ಇನ್ನಷ್ಟು ವಿಷದವಾಗಿ ನಿರೂಪಿಸಲು ನೆರವಾಗುತ್ತವೆ. ಆದರೆ ಇಂದಿನ ಜಗತ್ತಿಗೆ ಹೆಚ್ಚಿನ ಗಾದೆ ಮಾತುಗಳು ಅನ್ವಯವಾಗುವುದಿಲ್ಲ. ಪ್ರಸ್ತುತ ಪರಿಸ್ಥಿತಿಗೆ ಗಾದೆಯು ಹೇಗೆ ಅನ್ವಯವಾಗುತ್ತದೆ ಎಂಬ ಕತೆಯನ್ನೂ ಹೇಳಬೇಕಾದ ಅನಿವಾರ್ಯತೆ ಇಂದು ಇದೆ.

ಅಭಿವ್ಯಕ್ತಿ ಹೇಗಿರಬೇಕು ಎಂಬ ಕುರಿತು ಮಕ್ಕಳಿಗೆ ವಿವರವಾಗಿ ಪಾಠ ಮಾಡುವ ಅವಶ್ಯಕತೆ ಇದೆ. ಕೊನೇ ಪಕ್ಷ, ಗಾಂಭೀರ್ಯದಿಂದ ನಡೆದು ಬರುವ ಆನೆಯನ್ನು ನೋಡಿದಾಗ, ‘ಹೆಲ್’ ಎಂಬ ಪದವನ್ನು ಬಳಸಬಾರದು ಎನ್ನುವುದನ್ನಾದರೂ ಹೇಳಿಕೊಡಬೇಕಿದೆಯಲ್ಲವೇ.

ಹಲವಾರು ಸಂದರ್ಭಗಳಲ್ಲಿ ಮೌನವೇ ಅಭಿವ್ಯಕ್ತಿಯಾಗಿ ಇರಬೇಕಾಗುತ್ತದೆ. ದುಃಖವನ್ನು ಹಂಚಿಕೊಂಡಾಗ, ನೋವಿನ ಉದ್ಗಾರಗಳಿಗೆ ಮಾತಿನ ಪ್ರತಿಕ್ರಿಯೆ ಕಡಿಮೆ ಇದ್ದಷ್ಟೂ ಒಳ್ಳೆಯದು. ಹಗುರವಾದ ಸ್ಪರ್ಶ, ಕಣ್ಣಲ್ಲೇ ಸಾಂತ್ವನ ಹೇಳುವ ರೀತಿಗಳೂ ಇವೆ! ಅವನ್ನೆಲ್ಲ ಬಹಳ ವಾಚ್ಯವಾಗಿ ಹೇಳಿಕೊಡುವುದು ಚೆನ್ನಾಗಿರುವುದಿಲ್ಲ. ಅವು ಕತೆ, ಹಾಡು, ಸಂಭಾಷಣೆಯ ಗಮನಿಸುವಿಕೆಯ ಮೂಲಕ ಮಕ್ಕಳಿಗೆ ಸ್ಪಷ್ಟವಾಗಿ ಅರಿವಾಗುತ್ತದೆ. ಇಂತಹ ಪಾಠಗಳು ಶಾಲೆಯಲ್ಲಿ ಸಿಗುವುದಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ಇಂತಹ ವಿಚಾರಗಳಿಗೆ ಹೆಚ್ಚು ಜಾಗವೂ ಇಲ್ಲ. ಆದರೆ ಇದೀಗ ಲಾಕ್‌ಡೌನ್ ಎಂಬ ಅವಕಾಶವೊಂದು ದೊರೆತಿದೆ. ಮಕ್ಕಳಿಗೆ ಇಂತಹ ವಿಚಾರಗಳನ್ನು ಹೇಳಿಕೊಡಲು ಇದಕ್ಕಿಂತ ಸುಸಮಯ ಮತ್ತೊಂದಿಲ್ಲ. ದುಃಖದ, ನೋವಿನ ವಿಚಾರಗಳನ್ನೇ ಕೇಳಬೇಕಾದ ಈ ಸಂದರ್ಭದಲ್ಲಿ ‘ಓದುವಿಕೆ’ ಸಾಂತ್ವನದ ಮಾಧ್ಯಮವಾಗಬಲ್ಲದು.

ನಾಟಕ ಕೈಗೆತ್ತಿಕೊಂಡರೆ, ಸಂಭಾಷಣೆಗಳನ್ನು ಭಾವಪೂರ್ಣವಾಗಿ ಓದಬಹುದು. ಕತೆಯದರೂ ಸರಿ, ಕಾಮಿಕ್ಸ್‌ಗಳಾದರೂ ಸರಿ. ಸಿನಿಮಾಗಳನ್ನು ನೋಡುವಾಗಲೂ ಇಂತಹ ವಿಚಾರಗಳತ್ತ ಗಮನಹರಿಸುವಂತೆ ಮಕ್ಕಳಿಗೆ ಆಗೊಮ್ಮೆ ಈಗೊಮ್ಮೆ ಚಿಕ್ಕ ಟಿಪ್ಸ್ ಕೊಡಬಹುದು. ಸಿನಿಮಾ ನೋಡಿದ ಮೇಲೆ, ಕೆಲವು ಸನ್ನಿವೇಶಗಳ ಬಗ್ಗೆ ಮನೆಯವರೆಲ್ಲ ಕುಳಿತು ಚರ್ಚೆ ಮಾಡಬಹುದು. ಬಳಸಬಾರದ ಪದಗಳು ಸಿನಿಮಾದಲ್ಲಿ ಗೋಚರಿಸಿದರೆ, ಅದನ್ನೂ ಚರ್ಚಿಸಬಹುದು. ಸಕಾರಾತ್ಮಕವಾದ ಗುರುತಿಸುವಿಕೆಗೆ ಪೂರಕವಾದ ಪದಗಳಿಗಂತೂ ಬರವಿಲ್ಲ.

ಎಲ್ಲ ಸರಿ. ಮನೆಯಲ್ಲಿ ದೊಡ್ಡವರು ಪರಸ್ಪರ ಸಂಭಾಷಿಸುವಾಗಲೂ ಪದಗಳ ಮೇಲೆ ಹಿಡಿತವಿರುವುದು ಎಲ್ಲದಕ್ಕಿಂತಲೂ ಮುಖ್ಯ ವಿಚಾರ.



ಪ್ರತಿಕ್ರಿಯಿಸಿ:
**feedback@sudha.co.in**